**ದಿ: 09-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಬಿ.ಎಸ್. ವಕೀಲರಿಂದ:**

1. ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಗೊತ್ತಿದೆ. ಈ ದಾವೆಯನ್ನು ಬಸವರಾಜ ತಂದೆ ಮೋಶಪ್ಪ ಇವರು ಬೂದೆಪ್ಪ ಇವರ ಮೇಲೆ ಹಣ ಬರಬೇಕೆಂದು ಸಲುವಾಗಿ ಸಲ್ಲಿಸಿರುತ್ತಾರೆ. ವಾದಿ ಪ್ರತಿವಾದಿಗೆ ಹಣ ಪಾವತಿ ಮಾಡಿರುವುದನ್ನು ನಾನು ನೋಡಿದ್ದೇನೆ. ದಿನಾಂಕ: 02-01-2012 ರಂದು ಹಣವನ್ನು ಸಬ್ ರಜಿಸ್ಟ್ರರ್ ಕಚೇರಿಯಲ್ಲಿ ಪಾವತಿಸಿರುತ್ತಾರೆ. ಸಬ್ ರಜಿಸ್ಟ್ರರ್ ಕಚೇರಿಯಲ್ಲಿ ಆ ದಿನ ಸರ್ವೆ ನಂಬರ್ 152 ರಲ್ಲಿ ಒಟ್ಟು ವಿಸ್ತೀರ್ಣ 16 ಎಕರೆ 39 ಗುಂಟೆ ಪೈಕಿ 02 ಎಕರೆ 09 ಗುಂಟೆ ಜಮೀನು ಒತ್ತಿ ಪತ್ರ ಬರೆದಿರುತ್ತಾರೆ. ಒತ್ತಿಪತ್ರವನ್ನು ನಾನು ನೋಡಿದ್ದೇನೆ ಅದರಲ್ಲಿ ಬಡ್ಡಿ ಬಗ್ಗೆ ಬರೆದಿರುವುದಿಲ್ಲ. ಒತ್ತಿ ಪತ್ರ ಬರೆದ ನಂತರ ವಾದಿ ಮತ್ತು ಪ್ರತಿವಾದಿಯ ನಡುವೆ ಏನೇನು ಮಾತುಕತೆಯಾಗಿದೆ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ಬಡ್ಡಿಯ ಬಗ್ಗೆ ಮಾತುಕತೆಯಾಗಿದೆ ಅದು ಬಿಟ್ಟು ಏನೂ ಆಗಿದೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದ 2 ಪ್ರತಿಶತ ಬಡ್ಡಿ ಕೊಡಬೇಕೆಂದು ಊರಿನಲ್ಲಿ ಮಾತುಕತೆಯಾಗಿರುತ್ತದೆ. ಯಾವ ದಿನಾಂಕ ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬಡ್ಡಿ ಕೊಡಬೇಕೆಂಬ ವಿಷಯವನ್ನು ಹೇಳಿ ಬರೆಸಿಲ್ಲ.

2. 09-05-2016 ರಂದು ಸಾಕ್ಷಿದಾರರಾದ ಪ್ರತಿವಾದಿಯ ಸಹೋದರ ದುರಗಪ್ಪ ತಂದೆ ಹನುಮಂತ, ಸಾಹೇಬಗೌಡ ತಂದೆ ಗೌಡಪ್ಪಗೌಡ, ಅಮರೇಶಯ್ಯಸ್ವಾಮಿ ತಂದೆ ಚನ್ನಯ್ಯಸ್ವಾಮಿ ಗ್ರಾಮ ಪಂಚಾಯಿತಿ

ಸದಸ್ಯರು ಸಾ: ಗಬ್ಬೂರು ಇವರ ಸಮಕ್ಷಮದಲ್ಲಿ ನಗದು ರೂಪದಲ್ಲಿ ರೂ 96,000/-ಪ್ರತಿವಾದಿ ವಾದಿಗೆ ಕೊಟ್ಟಿರುತ್ತಾರೆ ಎಂದರೆ ಸುಳ್ಳು. ನಗದು ರೂಪದಲ್ಲಿ ರೂ 96,000/- ವಾದಿ ಪಡೆದುಕೊಂಡು ಅದನ್ನು ಮುಚ್ಚಿಟ್ಟಿರುತ್ತಾರೆಂದರೆ ಸುಳ್ಳು . ನಾವು ವಾದಿ ಮಾತು ಕೇಳಿಕೊಂಡು ಪ್ರತಿವಾದಿ ನಗದು ಹಣ ಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ಏನೂ ಹಣ ಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸಂಪೂರ್ಣ ಸುಳ್ಳಾಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ